



ಎರಡುಮೂರು ವರ್ಷಗಳು ಕಳೆದಿದ್ದವು. ಆರಂಭದಲ್ಲಿ ಬಾಪೂ ಅವರಂತೆ ಅಧ್ಯಯನ ಮಾಡಿ ಬ್ಯಾರಿಸ್ಟರ್ ಆಗುವ ಅತೀವ ಆಸೆಯಾಗುತ್ತಿತ್ತು. ಅದು ಕೆಲವು ತಿಂಗಳುಗಳಲ್ಲಿ ಶಾಂತವಾಗಿದ್ದರೂ, ಅದಿನ್ನೂ ಮನಸ್ಸಿನಲ್ಲಿ ಮನೆ ಮಾಡಿತ್ತು. ಅವನು ಸಂಪೂರ್ಣವಾಗಿ ತನ್ನನ್ನು ಆಶ್ರಮದ ಕೆಲಸಕಾರ್ಯಗಳಲ್ಲಿ ಹಾಗೂ ನಂತರದಲ್ಲಿ ಹೋರಾಟದಲ್ಲಿ ತೊಡಗಿಸಿಕೊಂಡಿದ್ದ. ನಂತರ ಗುಲಾಬಳ ಆಗಮನ, ತದನಂತರ ಮಗಳ ಜನನ. ಅದಾದ ನಂತರ ಹೊಸದಾಗಿ ಆರಂಭಗೊಂಡ ಗೃಹಸ್ಥಜೀವನದಲ್ಲಿ ನೆಮ್ಮದಿಯನ್ನು ಹುಡುಕಲಾರಂಭಿಸಿದ. ಇಂಥ ಸ್ಥಿತಿಯಲ್ಲಿ ಅಕಸ್ಮಾತ್ ವಿದೇಶಕ್ಕೆ ಹೋಗಿ ಬ್ಯಾರಿಸ್ಟರ್ ಆಗುವ ಉತ್ತಮ ಲಕ್ಷಣಗಳು ಗೋಚರಿಸಿದಾಗ, ಅವನ ಮನಸ್ಸಿನಲ್ಲಿ ಹೂತು ಹೋಗಿದ್ದ ಆಸೆ, ಸ್ಪ್ರಿಂಗ್‌ನಂತೆ ಅಕಸ್ಮಾತ್ ಪುಟಿದೆದ್ದಿತು. ಅವನ ಅಂಗಾಂಗಳಲ್ಲಿ ಸ್ಫೂರ್ತಿ ಚಿಮ್ಮಿತು. ಅವನು ಮರುಕ್ಷಣವೇ, 'ಬ್ಯಾರಿಸ್ಟರ್ ಎಚ್.ಎಂ. ಗಾಂಧಿ, ಬಾರ್‌ಎಟ್‌ಲಾ' ಎಂದು ತನ್ನ ಭವಿಷ್ಯದ ಕನಸನ್ನು ಕಂಡ.

ಆದರೆ ಒಂದು ವಿಷಯ ಸ್ಪಷ್ಟವಾಗಿತ್ತು: ಬ್ಯಾರಿಸ್ಟರ್ ಆಗಲು ವಿದೇಶಕ್ಕೆ ಹೋಗುವುದೆಂದರೆ, ಮೂರು ವರ್ಷಗಳ ಕಾಲ ಗುಲಾಬಳ ವಿರಹವನ್ನು ಸಹಿಸಬೇಕಾಗುವುದು. ಕೆಲವು ತಿಂಗಳುಗಳ ಹಿಂದೆ, ಅವನು ಇಲ್ಲಿಗೆ ಬರುವಾಗ ಆರಂಭದಲ್ಲಿ ಹೆಂಡತಿಯ ವಿರಹವನ್ನು ಸಹಿಸಿದ್ದ, ಅದಕ್ಕೆ ಹೋಲಿಸಿದಾಗ ಜೈಲುಯಾತ್ರೆಯ ದಿನಗಳು ಹೆಚ್ಚು ಕಷ್ಟಕರ ದಿನಗಳಾಗಿದ್ದವು. ಗುಲಾಬ ನಿರಂತರವಾಗಿ ನೆನಪಾಗುತ್ತಿದ್ದಳು. ಗುಲಾಬಳ ಜೊತೆಯಲ್ಲಿರುವ ಬಯಕೆ ಯಾವುದೇ ಕ್ಷಣದಲ್ಲೂ ಕಡಿಮೆಯಾಗುತ್ತಿರಲಿಲ್ಲ. ಗುಲಾಬಳೊಂದಿಗೆ ಕಳೆದ ಪ್ರೇಮದ ಗಳಿಗೆಗಳು ಮೂರು ವರ್ಷಗಳ ಕಾಲ ಮತ್ತೊಮ್ಮೆ ಅವನಿಗೆ ನೆನಪಾಗಿರುತ್ತವೆ.

ಅಂದು ರಾತ್ರಿ ಹರಿಲಾಲ ಹೆಂಡತಿಯ ಎದುರು ಮನ ಬಿಚ್ಚಿ ಹೇಳಿದ, 'ಗುಲಾಬ! ಬಾಪೂ ಅವರು ನನ್ನನ್ನು ಬ್ಯಾರಿಸ್ಟರ್ ಮಾಡಲು ವಿದೇಶಕ್ಕೆ ಕಳುಹಿಸಿದರೆ, ನೀನು...'

'ಸ್ವಾಮಿ, ನೀವು ನನ್ನ ಚಿಂತೆಯನ್ನು ಬಿಟ್ಟು ಬಿಡಿ' ಗುಲಾಬ ಪತಿಯ ಮುಖವನ್ನು ನೇವರಿಸುತ್ತಾ ಹೇಳಿದಳು, 'ನೋಡಿ, ನೀವು ಜೈಲಿನಲ್ಲಿದ್ದು ಎಷ್ಟು ಸೋತಿದ್ದೀರ. ನಿಮ್ಮ ಆಸೆಗೆ ನಾನೆಂದೂ ಅಡ್ಡಿಯಾಗಲ್ಲ. ನಾನು ನಿಮ್ಮ ಚರಣಗಳಲ್ಲಿನ ಹೂವಾಗಿ ಜೀವನವನ್ನು ಕಳೆಯಲು ಬಯಸುತ್ತೇನೆ.'

ಹರಿಲಾಲ ಭಾವಾವೇಶಕ್ಕೊಳಗಾಗಿ ಗುಲಾಬಳ ಎರಡೂ ಕೈಗಳನ್ನು ಹಿಡಿದುಕೊಂಡ. ಗುಲಾಬಳ ಕಣ್ಣುಗಳು ತುಂಬಿ ಬಂದವು. ಹರಿಲಾಲ ಆ ಕಣ್ಣುಗಳನ್ನು ಒರೆಸಿದ.

'ಗುಲಾಬ, ನೀನು ನನ್ನನ್ನು ಅದೆಷ್ಟು ಪ್ರೀತಿಸುತ್ತೀಯ, ನನಗೆ ಒಮ್ಮೊಮ್ಮೆ ಭಯ...'

'ಭಯ? ಪ್ರೀತಿಯಲ್ಲಿ ನಿಮಗೆ ಭಯವಾಗುವುದೇ?' ಗುಲಾಬ ಮುಗ್ಧತೆಯಿಂದ ಕೇಳಿದಳು.

'ಹೌದು, ನಾನು ಇಷ್ಟೊಂದು ಪ್ರೀತಿಯನ್ನು ಸಹಿಸಲು ಆಗದಿದ್ದರೆ...?'

'ಹೀಗೆಂದೂ ಯೋಚಿಸಬೇಡಿ...' ಗುಲಾಬ ಪತಿಯ ಎದೆಗೊರಗಿದಳು, 'ಯಾವ ಪ್ರೀತಿ ನೀವು ಬದುಕಲು ಶಕ್ತಿಯನ್ನು ಕೊಡುವುದಿಲ್ಲವೋ, ಆ ಪ್ರೀತಿ ನನ್ನದಾಗದು, ಸ್ವಾಮಿ. ನೀವು ಸಂತೋಷದಿಂದ ವಿದೇಶಕ್ಕೆ ಹೋಗಿ. ನಮ್ಮ ಬಗ್ಗೆ ಸ್ವಲ್ಪವೂ ಯೋಚಿಸಬೇಡಿ.'

ಮರುದಿನದಿಂದ ಹರಿಲಾಲ ಆಶ್ರಮದ ಕೆಲಸಕಾರ್ಯಗಳಲ್ಲಿ ಹೆಚ್ಚು ಉತ್ಸಾಹ ಮತ್ತು ಪರಿಶ್ರಮದಿಂದ ತನ್ನನ್ನು ತೊಡಗಿಸಿಕೊಂಡ. 'ಇಂಡಿಯನ್ ಒಪೀನಿಯನ್' ಕೊಠಡಿಯಲ್ಲಿ ಈಗ ತಡರಾತ್ರಿಯವರೆಗೂ ದೀಪ ಉರಿಯುತ್ತಿತ್ತು. ಪೋಲಕ್ ಮರಳಿ ಜೋಹಾನ್ಸ್‌ಬರ್ಗ್‌ಗೆ ಹೊರಟು ಹೋಗಿದ್ದರು. ಅಲ್ಲಿಂದ ಅವರು ಕೆಲವೇ ದಿನಗಳಲ್ಲಿ ಹಿಂದೂಸ್ತಾನಕ್ಕೆ ಹೋಗ ಬೇಕಿತ್ತು. ಬಾಪೂ ಅವರೇ ಪೋಲಕರಿಗೆ, ಹಿಂದೂಸ್ತಾನಕ್ಕೆ ಹೋಗಿ ಅಲ್ಲಿಯ ಸರ್ಕಾರ ಮತ್ತು ಜನರ ನಡುವೆ ಆಫ್ರಿಕಾದ ಹೋರಾಟದ ಬಗ್ಗೆ ವಸ್ತುಸ್ಥಿತಿಯನ್ನು ಪ್ರಚಾರ ಮಾಡುವಂತೆ ಸುದ್ದಿಯನ್ನು ಕಳುಹಿಸಿದ್ದರು. ಹರಿಲಾಲ ವಿದೇಶದಿಂದ ಮತ್ತಷ್ಟು ಮಾಹಿತಿಯನ್ನು ಕಾತುರದಿಂದ ನಿರೀಕ್ಷಿಸುತ್ತಿದ್ದ. ಆಗ ಅವನು ಆಶ್ರಮವನ್ನು ಬಿಟ್ಟು ಜೋಹಾನ್ಸ್‌ಬರ್ಗ್‌ಗೆ ಹೋಗಲು ಸಾಧ್ಯವಿರಲಿಲ್ಲ, ಹೀಗಾಗಿ ಹೆಚ್ಚು ವಿಷಯಗಳು ತಿಳಿಯುತ್ತಿರಲಿಲ್ಲ. ನಿತ್ಯ ಅವನ ಕಾತುರತೆ ಹೆಚ್ಚುತ್ತಿತ್ತು. ಹೋರಾಟದ ಕಾವು ಸಹ ಮಂದವಾಗಿತ್ತು. ಬಾಪೂ ಅವರ ಪ್ರಯಾಸಗಳಿಂದ, ವಿದೇಶದಿಂದ ಬರುವ ಪರಿಣಾಮಗಳ ನಿರೀಕ್ಷೆಯಲ್ಲಿ ಹರಿಲಾಲನಿದ್ದ.

ಕಡೆಗೆ ಈ ಕಾತುರತೆಯ ಅಂತ್ಯವಾಯಿತು.

ಜೋಹಾನ್ಸ್‌ಬರ್ಗ್‌ನಿಂದ ಬ್ಯಾರಿಸ್ಟರ್ ರಿಚ್‌ನ ತಂತಿ ಸಂದೇಶ ಲಭಿಸಿತು

'ವಿದೇಶದಲ್ಲಿ ಮಿಸ್ಟರ್ ಗಾಂಧಿಯ ಪ್ರಯಾಸಗಳು ಯಶಸ್ಸನ್ನು ಪಡೆದಿವೆ. ಇನ್ನು ಕೆಲವೇ ದಿನಗಳಲ್ಲಿ ಮಿಸ್ಟರ್ ಗಾಂಧಿ ಫೀನಿಕ್ಸ್ ಆಶ್ರಮಕ್ಕೆ ಬರುತ್ತಾರೆ'

ಬಾಪೂ ಫೀನಿಕ್ಸ್ ಆಶ್ರಮಕ್ಕೆ ಮರಳಿ ಬಂದ ದಿನ, ಆಶ್ರಮದಲ್ಲಿ ಮತ್ತೊಮ್ಮೆ ಹಬ್ಬದ ವಾತಾವರಣ ಮೂಡಿತ್ತು.

ಈ ಬಾರಿ ಬಾಪೂ ಅವರು ದೀರ್ಘ ಅವಧಿಯ ನಂತರ ಆಶ್ರಮಕ್ಕೆ ಮರಳಿ ಬಂದಿದ್ದರು, ಅವರು ಬಂದೊಡನೆಯೇ ಸೂಕ್ಷ್ಮವಾಗಿ ಆಶ್ರಮದ ಇಡೀ ವ್ಯವಸ್ಥೆ ಮತ್ತು ಅಲ್ಲಿಯ ಕೆಲಸಕಾರ್ಯಗಳನ್ನು ಗಮನಿಸಿದರು. ಪೋಲಕ್, ಬಾಪೂ ಅವರ ಆದೇಶದಂತೆ ಭಾರತಕ್ಕೆ ಹೋಗಿದ್ದರು. ಹೀಗಾಗಿ 'ಇಂಡಿಯನ್ ಒಪೀನಿಯನ್' ಪ್ರತಿಗಳನ್ನು ಕಾಲ ಕಾಲಕ್ಕೆ ಮುದ್ರಿಸುವ ಹೊಣೆಗಾರಿಕೆಯನ್ನು ಹರಿಲಾಲ ಒಂಟಿಯಾಗಿ ನಿರ್ವಹಿಸುತ್ತಿದ್ದ. ಅಲ್ಲಿಯವರೆಗೆ ಅವನು ಅದರ ಸಹಾಯಕನಾಗಿದ್ದ; ಮುಖ್ಯ ಕಾರ್ಯವನ್ನು ಛಗನ್‌ಲಾಲ್ ನಿರ್ವಹಿಸುತ್ತಿದ್ದ. ಬಾಪೂ ಅವರು ವಿದೇಶಕ್ಕೆ ಹೋದ ನಂತರ ಛಗನ್‌ಲಾಲ್ ಸಹ ಹಿಂದೂಸ್ತಾನಕ್ಕೆ ಹೊರಟು ಹೋಗಿದ್ದ. ಹೀಗಾಗಿ ಕಳೆದ ಮೂರು ತಿಂಗಳಿನಿಂದ ಹರಿಲಾಲನ ಹೆಗಲ ಮೇಲೆ ಎಲ್ಲಾ ಕೆಲಸಕಾರ್ಯಗಳ ಭಾರ ಬಿದ್ದಿತ್ತು.

'ಹರಿ,' ಬಾಪೂ ಅವರು ಹರಿಲಾಲನ ಕೆಲಸಗಳನ್ನು ನೋಡಿ ಸಂತಸವನ್ನು ವ್ಯಕ್ತಪಡಿಸಿದರು, 'ನೀನು ಕೆಲಸವನ್ನು ಅರ್ಥ ಮಾಡಿಕೊಂಡಿದ್ದೀಯ, ಸಮರ್ಥವಾಗಿ ನಿರ್ವಹಿಸಿದ್ದೀಯ. ನನಗೆ ತುಂಬಾ ಸಂತೋಷವಾಗಿದೆ. ಕಳೆದ ಎರಡುಮೂರು ತಿಂಗಳಿನಿಂದ ನೀನು ಪಡೆದ ಶಿಕ್ಷಣವೇ ನಿನ್ನ ಜೀವನದ ಆಧಾರ ಸ್ತಂಭವಾಗಿರುತ್ತದೆ.'

ಬಾಪೂ ಅವರಿಗಾದ ಸಂತೋಷದಿಂದ ಹರಿಲಾಲನಿಗೆ ಹಿತವೆನಿಸಿತು. ಆದರೆ ಅದು ಬಾಪೂ ಅವರ ಬಾಯಿಯಿಂದ ಹೊರಟ ಪ್ರಮಾಣ ಪತ್ರವಾಗಿರಲಿಲ್ಲ. ವಿದೇಶಕ್ಕೆ ಹೋಗುವ ಬಗ್ಗೆ, ಬಾಪೂ ಅವರು ಡಾ.ಪ್ರಾಣ್ ಲಾಲ್ ಮೆಹತಾ ಅವರ ಪ್ರಸ್ತಾಪಕ್ಕೆ ಬಾಪೂ ಅವರೇ ತೀರ್ಮಾನ ಹೇಳುವವರೆಗೆ, ಹರಿಲಾಲನಿಗೆ ನೆಮ್ಮದಿ ಇರಲಿಲ್ಲ. ಬಾ ಅವರಿಗೆ ಹರಿಲಾಲನ ಕಾತುರತೆ ತಿಳಿದಿತ್ತು, ಅವರು ಮಗನ ಮನಸ್ಸಿನಲ್ಲಿದ್ದ ವಿಷಯವನ್ನು ಪ್ರಸ್ತಾಪಿಸುತ್ತಾ ಪ್ರಶ್ನಿಸಿದರು

'ಜೈಲಿನಿಂದ ಬಂದ ನಂತರ ಹರಿಲಾಲ ವ್ಯಗ್ರನಾಗಿದ್ದಾನೆ...ಇದು...ಇದು...'

'ಯಾಕೆ? ಅಂಥದ್ದೇನಾಯಿತು...' ಬಾಪೂ ಸಹಜವಾಗಿ ಕೇಳಿದರು.

ಪೋಲಕ್ ಭೈಯ್ಯಾರಿಗೆ ನೀವು ಬರೆದ ಪತ್ರದಲ್ಲಿ, ಡಾ.ಪ್ರಾಣ್ ಜೀವನ್ ಮೆಹತಾರವರು, 'ವಿದೇಶದಲ್ಲಿ ಬ್ಯಾರಿಸ್ಟರ್ ಅಧ್ಯಯನಕ್ಕಾಗುವ ಖರ್ಚುವೆಚ್ಚವನ್ನು ಭರಿಸಲು ಸಿದ್ಧರಿದ್ದಾರೆ ಎಂದು ತಿಳಿಸಿದ್ದಿರಿ...' ಬಾ ಮೆಲ್ಲನೆ ಉಸುರಿದರು.

'ಹೌದು. ಪ್ರಾಣ್ ಜೀವನ್ ಭಾಯಿಯವರಿಗೆ ನಮ್ಮ ಬಗ್ಗೆ ತುಂಬಾ ಸ್ನೇಹವಿದೆ. ಅವರು ತುಂಬಾ ಸಜ್ಜನರು...' ಬಾಪೂ ಹೇಳಿದರು, 'ಒಂದು ವೇಳೆ ನಾವು ಇಲ್ಲಿಂದ ಒಬ್ಬರನ್ನು ಅಧ್ಯಯನಕ್ಕಾಗಿ ಕಳುಹಿಸಿದರೆ ಅವರು ಅದರ ಖರ್ಚುವೆಚ್ಚವನ್ನು ಅವರೇ ಖುದ್ದು ಭರಿಸುವುದಾಗಿ ಪ್ರಸ್ತಾಪವನ್ನಿಟ್ಟಿದ್ದಾರೆ...' ಬಾಪೂ ನಕ್ಕು ಹೇಳಿದರು, 'ಸರಿಯೇ. ನಾನು ಬಡ ವ್ಯಾಪಾರಿ, ನನ್ನ ಬಳಿ ಬಿಡಗಾಸೂ ಸಹ ಇಲ್ಲ ಎನ್ನುವುದು ಡಾ.ಮೆಹತಾ ಅವರಿಗೆ ತಿಳಿದಿದೆ?'

'ಡಾ.ಮೆಹತಾ ಅವರಿಗೆ ಒಳ್ಳೆಯದಾಗಲಿ,' ಬಾ ಹೃದಯ ಪೂರ್ವಕವಾಗಿ ಆಶೀರ್ವದಿಸಿದರು, 'ನೀವು ಬಡವರಾಗಿರಬಹುದು, ಆದರೆ ನಿಮ್ಮ ಕೆಲಸ ಈ ರೀತಿಯಿಂದಲೇ ಮಾತನಾಡುತ್ತದೆ.'

'ಡಾ.ಮೆಹತಾ ಅವರು, ಗಾಂಧಿಯವರು ತಮ್ಮ ಒಬ್ಬ ಮಗನನ್ನು ವಿದೇಶಕ್ಕೆ ಕಳುಹಿಸಲಿ ಎಂದು ಹೇಳಿದರು...' ಬಾಪೂ ಅವರು ವಿಷಯವನ್ನು ತಿಳಿಸಿದರು.

'ಬಾಪೂಜಿ, ಅದಕ್ಕೆ ನೀವೇನು ಹೇಳಿದಿರಿ?' ಹರಿಲಾಲ ನಡುವೆ ಬಾಯಿ ಹಾಕಿದ.

'ಡಾ.ಮೆಹತಾ ಒಳ್ಳೆಯ ಮನುಷ್ಯರು. ನಾವಿಲ್ಲಿ ಮಾಡುತ್ತಿರುವ ಕೆಲಸವನ್ನು ನೋಡಿ ತಮ್ಮ ಪ್ರೀತಿಯನ್ನು ವ್ಯಕ್ತಪಡಿಸುವುದಕ್ಕೆ, ಅವರು ನನಗೆ ಹೀಗೆ ಹೇಳಿದರು...'

'ಬಾಪೂಜಿ, ನಂತರ ನೀವೇನು ಹೇಳಿದಿರಿ?' ಹರಿಲಾಲನ ಉದ್ವೇಗ ಹೆಚ್ಚುತ್ತಿತ್ತು.

'ಒಂದು ವೇಳೆ ನಾನು ಅವರ ಮಾತನ್ನು ಒಪ್ಪಿಕೊಂಡರೆ, ದೇಶಕ್ಕಾಗಿ ನಾನೇನು